## ‘ಗೂಗಲ್’ ಮತ್ತು ಆಲ್‌ರೌಂಡರ್!



ಡಾ. ವಿ. ನಾಗೇಂದ್ರಪ್ರಸಾದ್ ಕನ್ನಡ ಚಿತ್ರರಂಗದ ಆಲ್‌ರೌಂಡರ್‌ಗಳಲ್ಲೊಬ್ಬರು. ಗೀತರಚನೆಕಾರ, ನಟ, ನಿರ್ದೇಶಕ, ನಿರ್ಮಾಪಕ, ಸಂಘಟಕ – ಹೀಗೆ ಹಲವು ರೂಪಗಳಲ್ಲಿ ಗಾಂಧಿನಗರದಲ್ಲಿ ಚಾಲ್ತಿಯಲ್ಲಿದ್ದಾರೆ. ಪ್ರಸ್ತುತ ನಿರ್ದೇಶಕರ ಸಂಘದ ಅಧ್ಯಕ್ಷರೂ ಹೌದು. ಡಬ್ಬಿಂಗ್ ವಿರೋಧಿ ಚಳವಳಿಯಲ್ಲಿ ಅವರದು ಪ್ರಮುಖ ಹೆಸರು. ಇದೆಲ್ಲದರ ನಡುವೆಯೂ ನಿರ್ದೇಶಕನಾಗಿ ಅವರು ‘ಗೂಗಲ್’ ಚಿತ್ರವನ್ನು ಮುಗಿಸಿದ್ದಾರೆ. ನಿರ್ದೇಶನದ ಜೊತೆಗೆ ಕಥೆ, ಚಿತ್ರಕಥೆ, ಸಾಹಿತ್ಯ–ಸಂಭಾಷಣೆ ಹಾಗೂ ಚಿತ್ರದ ನಿರ್ಮಾಣವೂ ಅವರದ್ದೇ.

‘ಈ ಭೂಮಿ ಬಣ್ಣದ ಬುಗುರಿ’ ಎನ್ನುವುದು ಚಿತ್ರಶೀರ್ಷಿಕೆಯ ಅಡಿಟಿಪ್ಪಣಿ. ಇದು ಬದುಕಿನ ಸಂಕೀರ್ಣತೆಯನ್ನು ಸೂಚಿಸುವ ವಿಶೇಷಣ. ‘ಗೂಗಲ್’ ಸೂಚಿಸುವುದು ನಾವು ಜೀವಿಸುತ್ತಿರುವ ವ್ಯವಸ್ಥೆಯಲ್ಲಿನ ಸಂಕೀರ್ಣತೆಯನ್ನು. ಯುವ ತಲೆಮಾರಿನ ಪಾಲಿಗೆ ‘ಗೂಗಲ್’ ಎನ್ನುವುದು ಹುಡುಕಾಟದ ಒಂದು ಜಾದೂಕಿಂಡಿಯಷ್ಟೇ! ಇಂಥದ್ದೊಂದು ಹುಡುಕಾಟ ಚಿತ್ರದಲ್ಲೂ ಇದೆಯಂತೆ. ಬದುಕಿಗೆ ಏನು ಬೇಕು, ಯಾವುದು ಬೇಡ ಎನ್ನುವುದನ್ನು ಚಿತ್ರದ ಮೂಲಕ ಹುಡುಕುವ ಪ್ರಯತ್ನ ನಿರ್ದೇಶಕರದು.

ನಾಗೇಂದ್ರ ಪ್ರಸಾದ್ ಚಿತ್ರದ ಪ್ರಮುಖ ಪಾತ್ರವೊಂದರಲ್ಲಿ ನಟಿಸಿದ್ದಾರೆ. ಶುಭಾ ಪೂಂಜಾ ತಾರಾಗಣದಲ್ಲಿರುವ ಮತ್ತೊಂದು ಪ್ರಮುಖ ಹೆಸರು. ಕಳೆದ ವಾರವಷ್ಟೇ ‘ಗೂಗಲ್’ ಚಿತ್ರದ ಗೀತೆಗಳ ಧ್ವನಿಮುದ್ರಿಕೆ ಪೇಟೆಗೆ ಬಂದಿದೆ. ಸದ್ಯದಲ್ಲೇ ಚಿತ್ರವನ್ನು ತೆರೆ ಕಾಣಿಸುವ ಉಮೇದು ನಾಗೇಂದ್ರಪ್ರಸಾದ್‌ರದು.



# ದಶಕ ದಾಟಿದ ಸಂಭ್ರಮದಿ ಶುಭಾ

ಶುಭಾ ಪೂಂಜ ಕೊಂಚ ತೆಳ್ಳಗಾಗಿದ್ದಾರೆ. ನಾಯಕಿಯೊಬ್ಬಳು ತೂಕ ಇಳಿಸಿಕೊಂಡಿದ್ದಾಳೆ ಎಂದರೆ ಹೊಸ ಅವಕಾಶಗಳ ನಿರೀಕ್ಷೆಯಲ್ಲಿರುವುದು ಎಂದೇ ಅರ್ಥ. ಅದಕ್ಕೆ ತಕ್ಕಹಾಗೆ ಹೊಸ ಅವಕಾಶಗಳು ಕೂಡ ಶುಭಾ ಅವರನ್ನು ಹುಡುಕಿಕೊಂಡು ಬರುತ್ತಿವೆ.

‘ಕೆಲವು ದಿನಗಳ ನಂತರ’ ಶುಭಾ ನಟಿಸುತ್ತಿರುವ ಹೊಸ ಚಿತ್ರಗಳಲ್ಲೊಂದು. ಮುಕ್ಕಾಲುಪಾಲು ಚಿತ್ರೀಕರಣ ಮುಗಿಸಿರುವ ಈ ಸಿನಿಮಾ ಹೊಸ ತಲೆಮಾರಿನ ಬದುಕಿನ ತವಕತಲ್ಲಣಗಳನ್ನು ಹಿಡಿದಿಡುವ ಪ್ರಯತ್ನ ನಡೆಸಿದೆಯಂತೆ. ಟೆಕ್ಕಿಗಳ ಬಳಗವೊಂದು ಗೆಳತಿಯ ವಿವಾಹ ವಾರ್ಷಿಕೋತ್ಸವಕ್ಕೆ ತೆರಳುವಾಗ, ವಿಚಿತ್ರ ಅನುಭವಗಳಿಗೆ ಪಕ್ಕಾಗುವುದು ಚಿತ್ರದ ಕಥೆ. ಶ್ರೀನಿ ನಿರ್ದೇಶನದ ಈ ಚಿತ್ರದಲ್ಲಿ ಶುಭಾ ಹಾಗೂ ಜಗದೀಶ್ ಮುಖ್ಯ ಪಾತ್ರಗಳಲ್ಲಿ ನಟಿಸಿದ್ದಾರೆ. ಕಿರುತೆರೆಯ ‘ಕಾಮಿಡಿ ಕಿಲಾಡಿಗಳು’ ಖ್ಯಾತಿಯ ಲೋಕೇಶ್ ಜೊತೆಗೆ ಸೋನು ಶೆಟ್ಟಿ, ಕಾವ್ಯಾ ಶೆಟ್ಟಿ ಮುಂತಾದವರು ತಾರಾಗಣದಲ್ಲಿದ್ದಾರೆ.

ಶುಭಾ ನಟನೆಯ ಮತ್ತೊಂದು ಚಿತ್ರ ‘ಗೂಗಲ್’ ತೆರೆಕಾಣುವ ಹಂತದಲ್ಲಿದೆ. ಈ ನಡುವೆ ವಿಜಯ ರಾಘವೇಂದ್ರ ನಾಯಕರಾಗಿರುವ ಚಿತ್ರವೊಂದರಲ್ಲೂ ಅವರು ನಟಿಸುತ್ತಿದ್ದಾರೆ. 2007ರಲ್ಲಿ ತೆರೆಕಂಡ ‘ಚಂಡ’ ಚಿತ್ರದ ಮೂಲಕ ನಾಯಕಿಯಾಗಿ ಗಮನಸೆಳೆದ ಶುಭಾ, ಚಿತ್ರರಂಗಕ್ಕೆ ಬಂದು ಹತ್ತು ವರ್ಷಗಳು ತುಂಬಿದವು. ಈ ದಶಕದ ದಾರಿಯಲ್ಲಿ ಅವರು ಯಶಸ್ಸನ್ನು ಕಂಡಂತೆಯೇ ಸೋಲುಗಳನ್ನೂ ಕಂಡಿದ್ದಾರೆ. ಗಾಸಿಪ್ ಕಾಲಂಗಳಲ್ಲಿಯೂ ಕಾಣಿಸಿಕೊಂಡಿದ್ದಾರೆ. ಆದರೆ, ನಟನೆಯ ಕುರಿತ ಶ್ರದ್ಧೆ , ವೃತ್ತಿಪರತೆ ಹಾಗೂ ನಿರ್ಮಾಪಕಸ್ನೇಹಿ ಮನೋಭಾವಗಳು ಅವರನ್ನು ಚಿತ್ರರಂಗದಲ್ಲಿ ಇನ್ನೂ ಚಾಲ್ತಿಯಲ್ಲಿಟ್ಟಿವೆ. ವೃತ್ತಿಜೀವನದ ದಶಕದ ಸಂಭ್ರಮ ಶುಭಾ ಅವರಿಗೆ ಅರ್ಥಪೂರ್ಣ ಪಾತ್ರಗಳನ್ನು ತಂದುಕೊಡಲಿ.

■ ರಘು